# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 611 |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ವಿಷಯ | : | ರೇಷ್ಮೆ ಬಿತ್ತನೆ ಕೋಠಿಯ ಬಗ್ಗೆ. |
| ಉತ್ತರಿಸುವ ದಿನಾಂಕ | : | 23.12.2022 |
| ಉತ್ತರಿಸುವವರು | : | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | 2022-23ನೇ ಸಾಲಿಗೆ ಸರ್ಕಾರಿ ಬಿತ್ತನೆ ಕೋಠಿ ಕೋಲಾರ ಇದನ್ನು ದುರಸ್ಥಿಗೊಳಿಸುವ ಸಂಬಂಧ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.25.00 ಲಕ್ಷ ಬಿಡುಗಡೆಯಾಗಿದ್ದು, ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ. (ಸಂಪೂರ್ಣ ಮಾಹಿತಿಯನ್ನು ನೀಡುವುದು) | 2022-23 ನೇ ಸಾಲಿಗೆ ಕೋಲಾರ ಜಿಲ್ಲೆ ಕೋಲಾರ ಸರ್ಕಾರಿ ಬಿತ್ತನೆ ಕೋಠಿ ಕಟ್ಟಡ ದುರಸ್ತಿಗೊಳಿಸುವ ಸಂಬಂಧ ಲೆಕ್ಕಶೀರ್ಷಿಕೆ:4851-00-107-1-01(139) ಯೋಜನೆಯಡಿಯಲ್ಲಿ ರೂ.25.00 ಲಕ್ಷ ಅನುದಾನದಲ್ಲಿ ದಿನಾಂಕ: 04-05-2022 ರಂದು ರೂ. 23.50 ಲಕ್ಷಗಳು ಮೊದಲನೇ ಹಾಗೂ ದಿನಾಂಕ: 14-09-2022 ರಲ್ಲಿ ಈ ಕಾಮಗಾರಿಗೆ ಉಳಿದ ಮೊತ್ತವನ್ನು 2ನೇ ಕಂತಿನಲ್ಲಿ ಬಿಡುಗಡೆಗೊಳಿಸಿದೆ. ಬಿಡುಗಡೆಯಾದ ಅನುದಾನಕ್ಕೆ ಕೋಲಾರ ಸರ್ಕಾರಿ ಬಿತ್ತನೆ ಕೋಠಿ ಕಟ್ಟಡದ. ಆರ್.ಸಿ.ಸಿ ಮೇಲ್ಛಾವಣಿಗೆ ಪ್ರೊಫೈಲ್ ಶೀಟ್ ಹಾಗೂ ಟ್ರಸ್ ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿದ್ದು, ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿದೆ. ಕ್ರಿಯಾ ಯೋಜನೆ ಅನುಮೋದನೆಗೊಂಡು 6 ತಿಂಗಳ ನಂತರ ಕಾಮಗಾರಿಗೆ ಟೆಂಡರ್ ಆಹ್ವಾನಿಸಿರುವುದರಿಂದ. ಸಂಬಂಧಪಟ್ಟ ಇಂಜಿನಿಯರ್ ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. |
| ಆ | ಸರ್ಕಾರಿ ಬಿತ್ತನೆ ಕೋಠಿ ಕೋಲಾರ ದುರಸ್ಥಿ ಕಾಮಗಾರಿಗೆ ರೂಪಾಯಿ 25.00 ಲಕ್ಷ ಸಾಕಾಗುತ್ತದೆಯೆ. ಹಾಗಿದ್ದಲ್ಲಿ ರೂಪಾಯಿ 25.00 ಲಕ್ಷಕ್ಕೆ ಯಾವ ಯಾವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. (ಪೂರ್ಣ ಮಾಹಿತಿಯನ್ನು ನೀಡುವುದು) | ಕೋಲಾರ ಜಿಲ್ಲೆ ಕೋಲಾರ ಸರ್ಕಾರಿ ಬಿತ್ತನೆ ಕೋಠಿ ಕಟ್ಟಡದ ದುರಸ್ತಿಗಾಗಿ ಒಟ್ಟು ರೂ.25.00 ಲಕ್ಷಗಳು ಬಿಡುಗಡೆಗೊಳಿಸಿದ್ದು, ಸದರಿ ಕಟ್ಟಡದ ಸಂಪೂರ್ಣ ದುರಸ್ತಿ ಹಾಗೂ ಅಭಿವೃದ್ಧಿ ಕಾಮಗಾರಿಗೆ ಒಟ್ಟು, ರೂ.110.10 ಲಕ್ಷಗಳ ಅನುದಾನ ಅಂದಾಜು ವಿವರ ಕೆಳಕಂಡಂತಿರುತ್ತದೆ. |

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಪ್ರೊಫೈಲ್ ಶೀಟ್ ಹಾಗೂ ಟ್ರಸ್ | 25.00 |
| 2 | ನೈರ್ಮಲೀಕರಣ ಅಭಿವೃದ್ಧಿ ಮತ್ತು | 12.60 |

| | | | | |
|---|---|---|---|---|
| | | | ದುರಸ್ತಿ | |
| | | ೩ | ಯು.ಜಿ.ಡಿ. ಕಾಮಗಾರಿ | 7.00 |
| | | 4 | ನೀರು ಸರಬರಾಜು ಅಭಿವೃದ್ಧಿ ಹಾಗೂ ದುರಸ್ತಿ | 13.50 |
| | | ೫ | ಗೋಡೆ ಗಿಲಾವು, ಕಿಟಕಿ, ಬಾಗಿಲುಗಳ ದುರಸ್ತಿ ಹಾಗೂ ಅಭಿವೃದ್ಧಿ | 11.50 |
| | | ೬ | ಒಳ ಹಾಗೂ ಹೊರ ಭಾಗಕ್ಕೆ ಬಣ್ಣ ಹಚ್ಚುವ ಕಾಮಗಾರಿ | ೨೩.೫೦ |
| | | ೭ | ವಿದ್ಯುತ್ ದುರಸ್ತಿ ಹಾಗೂ ಬೀದಿ ದೀಪಗಳ ಕಾಮಗಾರಿ | 17.00 |
| | | | **ಒಟ್ಟು** | 110.10 |
| | | ಸದ್ಯಕ್ಕೆ ಮಳೆಗಾಲದಲ್ಲಿ ಕಟ್ಟಡವು ಸೋರುವುದನ್ನು ತಡೆಗಟ್ಟಲು ಹಾಗೂ ಬಿತ್ತನೆ ಕೋಠಿಯ ಕಾರ್ಯಚಟುವಟಿಕೆ ಯನ್ನು ಮುಂದುವರೆಸುವುದು ಅತ್ಯಾವಶ್ಯಕವಾಗಿರುವುದ ರಿಂದ, ಬಿತ್ತನೆ ಕೋಠಿ ಕಟ್ಟಡದ ಮೇಲ್ಛಾವಣಿಗೆ ಟ್ರಸ್ ಅಳವಡಿಸಿ ಆರ್.ಸಿ.ಸಿ ಮೇಲ್ಛಾವಣಿ ಮೇಲೆ ಪ್ರೊಫೈಲ್ ಶೀಟ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. | | |
| ಇ | ಸರ್ಕಾರಿ ಬಿತ್ತನೆ ಕೋಠಿ ಕೋಲಾರ ಇಲ್ಲಿಗೆ ಇನ್ನೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಸರ್ಕಾರಿ ಬಿತ್ತನೆ ಕೋಠಿ ಕೋಲಾರ ಕಟ್ಟಡದ ಸಂಪೂರ್ಣ ದುರಸ್ತಿ ಹಾಗೂ ಅಭಿವೃದ್ಧಿ ಕಾಮಗಾರಿ ಕಾರ್ಯಗಳನ್ನು ಕೈಗೊಳ್ಳಲು ಒಟ್ಟು ರೂ.110.10 ಲಕ್ಷಗಳಿಗೆ ಅಂದಾಜು ಕ್ರಿಯಾ ಯೋಜನೆ ಸಿದ್ಧಪಡಿಸಿ ತಯಾರಿಸಿದ್ದು, ಪ್ರಸ್ತುತ ವರ್ಷದಲ್ಲಿ ಅನುದಾನದ ಲಭ್ಯತೆ ಮೇರೆಗೆ ರೂ.೨೫.೦೦ ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ತುರ್ತಾಗಿ ಮಳೆಗಾಲದಲ್ಲಿ ಕಟ್ಟಡವು ಸೋರುವುದನ್ನು ತಡೆಗಟ್ಟಲು ಹಾಗೂ ಬಿತ್ತನೆ ಕೋಠಿ ಕಾರ್ಯಚಟುವಟಿಕೆ ಮುಂದುವರೆಸುವುದು ಅತ್ಯಾವಶ್ಯಕ ವಾಗಿರುವುದರಿಂದ, ಬಿತ್ತನೆ ಕೋಠಿ ಕಟ್ಟಡದ ಮೇಲ್ಛಾವಣಿಗೆ ಟ್ರಸ್ ಅಳವಡಿಸಿ ಆರ್.ಸಿ.ಸಿ ಮೇಲ್ಛಾವಣಿ ಮೇಲೆ ಪ್ರೊಫೈಲ್ ಶೀಟ್ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿದೆ. | | |

ಕಡತ ಸಂಖ್ಯೆ: ರೇಷ್ಮೆ ೨೧೩ ರೇಕೃವಿ ೨೦೨೨

**(ಡಾ: ನಾರಾಯಣಗೌಡ)**
ರೇಷ್ಮೆ, ಯುವಸಬಲೀಕರಣ ಮತ್ತು
ಕ್ರೀಡಾ ಸಚಿವರು